# ಶ್ರೀರಾಮಕೃಷ್ಣ ವಚನವೇದದಿಂದ



## ಮಹಾಮಾಯೆ

ಭಗವಂತ ಎಲ್ಲವನ್ನೂ ತನ್ನ ಮಾಯೆಯಿಂದ ಮುಸುಕಿ ಇಟ್ಟಿದ್ದಾನೆ. ಯಾವುದನ್ನೂ ಅರಿಯಲು ಬಿಟ್ಟುಕೊಡುವುದಿಲ್ಲ. ಕಾಮ ಕಾಂಚನವೇ ಮಾಯೆ. ಯಾರು ಭಗವಂತನನ್ನು ನೋಡಬೇಕೆಂದು ಈ ಮಾಯೆಯ ಮುಸುಕನ್ನು ಹರಿದು ಒಂದು ಕಡೆಗೆ ಬಿಸಾಡುತ್ತಾನೋ, ಅವನು ಆತನನ್ನು ನೋಡಬಲ್ಲ. ಒಮ್ಮೆ ನಾನು ಒಬ್ಬನಿಗೆ ಭಗವಂತನ ಸಂಬಂಧವಾಗಿ ತಿಳಿಸುತ್ತ ತಿಳಿಸುತ್ತ ಮುಂದುವರಿಯುತ್ತಿದ್ದಾಗ, ಭಗವಂತ ಇದ್ದಕ್ಕಿದ್ದ ಹಾಗೆ ಆ ದೇಶದ (ಕಾಮಾರಪುಕುರದ) ಒಂದು ಕೆರೆಯನ್ನು ನನಗೆ ತೋರಿಸಿದ. ಒಬ್ಬ ಮನುಷ್ಯ ಅದರಲ್ಲಿದ್ದ ಪಾಚಿಯನ್ನು ಒಂದು ಕಡೆಗೆ ಸರಿಸಿ ನೀರು ಕುಡಿದುದನ್ನು ಕಂಡೆ. ನೀರು ಸ್ಫಟಿಕದಂತೆ ಇತ್ತು. ಭಗವಂತ ನನಗೆ ತೋರಿಸಿದ, ಸಚ್ಚಿದಾನಂದವೆಂಬ ನೀರು ಮಹಾ ಮಾಯೆಯ ಪಾಚಿಯಿಂದ ಮುಚ್ಚಲ್ಪಟ್ಟಿದೆ; ಯಾರು ಅದನ್ನು ಒಂದು ಕಡೆಗೆ ಸರಿಸಿಬಿಡುವರೋ, ಅವರಿಗೆ ನೀರು ಸಿಕ್ಕುತ್ತದೆ.

ವಿದ್ಯಾರೂಪಿಣಿ ಹೆಂಗಸೂ ಇದ್ದಾಳೆ. ಅವಿದ್ಯಾರೂಪಿಣಿ ಹೆಂಗಸೂ ಇದ್ದಾಳೆ. ವಿದ್ಯಾರೂಪಿಣಿ ಹೆಂಗಸು ಭಗವಂತನ ಕಡೆಗೆ ಕರೆದೊಯ್ಯುತ್ತಾಳೆ; ಆದರೆ ಅವಿದ್ಯಾರೂಪಿಣಿ ಹೆಂಗಸು ಭಗವಂತನನ್ನು ಮರೆಸಿ ಸಂಸಾರದಲ್ಲಿ ಮುಳುಗಿಸಿಬಿಡುತ್ತಾಳೆ.

ಭಗವಂತನ ಮಾಯೆಯಿಂದಲೇ ಈ ಜಗತ್ತು, ಈ ಸಂಸಾರ ಉದ್ಭವಿಸಿದೆ. ಮಹಾಮಾಯೆಯಲ್ಲಿ ವಿದ್ಯಾಮಾಯೆ ಅವಿದ್ಯಾಮಾಯೆ ಎರಡೂ ಇವೆ. ವಿದ್ಯಾಮಾಯೆಯನ್ನು ಅವಲಂಬಿಸಿದರೆ, ಸಾಧುಸಂಗ, ಜ್ಞಾನ, ಭಕ್ತಿ, ಪ್ರೇಮ, ವೈರಾಗ್ಯ ಇವೆಲ್ಲ ಉಂಟಾಗುತ್ತವೆ. ಅವಿದ್ಯಾ ಮಾಯೆ ಎಂದರೆ ಪಂಚಭೂತಗಳು ಮತ್ತು ಪಂಚೇಂದ್ರಿಯಗಳ ವಸ್ತುಗಳು—ರೂಪ, ರಸ, ಗಂಧ, ಸ್ಪರ್ಶ, ಶಬ್ದ ಇವು ಭಗವಂತನನ್ನು ಮರೆಸಿಬಿಡುತ್ತವೆ.

ಅವಿದ್ಯೆಯಿಂದ ಅಜ್ಞಾನವುಂಟಾಗುವುದಾದರೆ, ಯಾಕೆ ಭಗವಂತ ಅದನ್ನು ಸೃಷ್ಟಿಸಿದ? ಆತನ ಲೀಲೆ. ಕತ್ತಲೆ ಇಲ್ಲದೆ ಇತ್ತು ಎಂದರೆ ಬೆಳಕಿನ ಮಹಿಮೆಯನ್ನು ಅರಿಯಲಾಗುವುದಿಲ್ಲ. ದುಃಖ ಇಲ್ಲದೆ ಇತ್ತು ಎಂದರೆ ಸುಖ ಏನು ಎಂಬುದನ್ನು ಅರಿಯಲಾಗುವುದಿಲ್ಲ. ಕೆಟ್ಟದ್ದು ಏನು ಎಂಬುದರ ಅರಿವು ಇದ್ದರೆ ತಾನೆ ಒಳ್ಳೆಯದು ಏನು ಎಂಬುದರ ಅರಿವು ಆಗಬೇಕಾದರೆ.

ಮತ್ತೆ, ಸಿಪ್ಪೆ ಇರುವುದರಿಂದ ತಾನೆ ಮಾವಿನಕಾಯಿ ಬೆಳೆಯುತ್ತದೆ, ಹಣ್ಣಾಗುತ್ತದೆ? ಮಾವಿನಕಾಯಿ ಪೂರ್ತಿ ಹಣ್ಣಾಗಿ ತಿನ್ನಲು ಸಿದ್ಧವಾಯಿತು ಎಂದರೆ ಆಗ ಸಿಪ್ಪೆ ಬಿಸಾಡಿಬಿಡಬೇಕಾಗುತ್ತದೆ. ಮಾಯಾ ರೂಪದ ಸಿಪ್ಪೆ ಇರುವುದರಿಂದ ಕ್ರಮೇಣ ಬ್ರಹ್ಮಜ್ಞಾನ ಸಾಧ್ಯ. ಮಾವಿನ ಕಾಯಿ ಸಿಪ್ಪೆಯ ಹಾಗೆ ವಿದ್ಯಾಮಾಯೆ, ಅವಿದ್ಯಾಮಾಯೆ ಎರಡೂ ಆವಶ್ಯಕ.

ಭಗವಂತ ಒಳಗೂ ಹೊರಗೂ ಇದ್ದಾನೆ. ಆತ ಅಂತರ್ಯ ದಲ್ಲಿದ್ದುಕೊಂಡು ಮನಸ್ಸು ವಿವಿಧ ಅವಸ್ಥೆ ತಾಳುವಂತೆ ಮಾಡುತ್ತಾನೆ. ಷಟ್ಚಕ್ರಗಳನ್ನು ಭೇದಿಸಿ ಮುಂದುವರಿದುದೇ ಆದರೆ ಜೀವಾತ್ಮ ಮಾಯಾರಾಜ್ಯವನ್ನು ಬಿಟ್ಟು ಪರಮಾತ್ಮನೊಡನೆ ಐಕ್ಯವಾಗಿಬಿಡುತ್ತಾನೆ. ಇದಕ್ಕೇ ಭಗವದ್ದರ್ಶನ ಅಂತ ಹೆಸರು.

ಮಾಯೆ ಬಾಗಿಲನ್ನು ಬಿಟ್ಟು ನಿಲ್ಲದವರೆಗೆ ಭಗವಂತನ ದರ್ಶನ ದೊರೆಯುವುದಿಲ್ಲ. ಒಮ್ಮೆ ರಾಮ, ಸೀತೆ, ಲಕ್ಷ್ಮಣ ಜೊತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಮುಂದುಗಡೆ ರಾಮ, ಮಧ್ಯೆ ಸೀತೆ, ಹಿಂದೆ ಲಕ್ಷ್ಮಣ. ಸೀತೆ ಮಧ್ಯೆ ಇದ್ದುದರಿಂದ ಲಕ್ಷ್ಮಣ ರಾಮನನ್ನು ನೋಡಲಾಗಲಿಲ್ಲ. ಅದೇ ರೀತಿ ಮಾಯೆ ಮಧ್ಯೆ ಇರುವುದರಿಂದ ಜೀವಾತ್ಮನಿಗೆ ಪರಮಾತ್ಮನ ದರ್ಶನ ದೊರೆಯುತ್ತಿಲ್ಲ. ಆದರೆ ಭಗವಂತ ಕೃಪೆ ಮಾಡಿದ ಅಂದರೆ, ಮಾಯೆ ಬಾಗಿಲುಬಿಟ್ಟು ನಿಂತುಕೊಂಡುಬಿಡುತ್ತಾಳೆ. ಭೇಟಿಕಾರ ಎದುರು ಬಂದು ನಿಂತುಕೊಂಡರೆ ದ್ವಾರಪಾಲಕ ತನ್ನ ಯಜಮಾನನಿಗೆ ತಿಳಿಸುತ್ತಾನೆ: "ಹುಕುಮ್ ಕೊಡಿ, ಒಳಕ್ಕೆ ಬಿಟ್ಟುಬಿಡುತ್ತೇನೆ."

ತ್ರಿಗುಣಾತೀತನಾಗುವುದು ಬಹಳ ಕಷ್ಟ. ಭಗವಂತನ ಸಾಕ್ಷಾತ್ಕಾರ ದೊರೆಯುವವರೆಗೆ ಅದು ಸಾಧ್ಯವಾಗುವುದಿಲ್ಲ. ಮನುಷ್ಯ ಮಾಯಾ ರಾಜ್ಯದಲ್ಲಿ ವಾಸಮಾಡುತ್ತಾನೆ. ಈ ಮಾಯೆ ಭಗವಂತನ ದರ್ಶನ ಮಾಡಲು ಬಿಟ್ಟುಕೊಡುತ್ತಿಲ್ಲ. ಇದು ಮನುಷ್ಯನನ್ನು ಅಜ್ಞಾನದಿಂದ ಮುಸುಕಿ ಇಟ್ಟುಬಿಟ್ಟಿದೆ.

ಮಾಯೆ ಯಾವುದು ಗೊತ್ತೇ? ತಾಯಿ-ತಂದೆ, ಸೋದರ-ಸೋದರಿ, ಹೆಂಡತಿ-ಮಕ್ಕಳು, ಸೋದರಳಿಯ-ಸೋದರಸೊಸೆ ಇವರೇ ಮೊದಲಾದ ಸ್ವಬಾಂಧವರಲ್ಲಿ ಇಡುವ ಪ್ರೀತಿಯೇ ಮಾಯೆ. ದಯೆ ಎಂದರೆ ಸರ್ವಭೂತಗಳಲ್ಲಿಯೂ ಒಂದೇ ಸಮ ಪ್ರೀತಿ.

ಕಾಮಕಾಂಚನವೇ ಮಾಯೆ. ಅದರ ಸ್ವರೂಪ ಏನು ಎಂಬುದನ್ನು ಅರಿತದ್ದೇ ಆದರೆ, ಅದು ನಾಚಿಕೆ ಪಟ್ಟುಕೊಂಡು ತಾನೇ ಕಂಬಿ ಕೀಳುತ್ತದೆ. ಒಬ್ಬ ಹುಲಿಯ ಚರ್ಮ ಹೊದ್ದುಕೊಂಡು ಒಬ್ಬನನ್ನು ಅಂಜಿಸುತ್ತಿದ್ದ. ಆದರೆ ಅವನಿಗೆ ಅದು ತಿಳಿದುಹೋಯಿತು. ಆಗ ಆತ ಹೇಳಿದ: "ನೀನು ಯಾರು ಎಂಬುದು ನನಗೆ ಗೊತ್ತು. ನೀನು ನಮ್ಮ ಹರಿ." ಆಗ ಹುಲಿಯ ಚರ್ಮ ಹೊದ್ದುಕೊಂಡಿದ್ದವನು ನಗುತ್ತ ಹೊರಟು ಹೋಗಿ ಇನ್ನೊಬ್ಬನನ್ನು ಅಂಜಿಸಲಾರಂಭಿಸಿದ.

ವೇದಾಂತದ ದೃಷ್ಟಿಯಿಂದ ಬ್ರಹ್ಮ ಮಾತ್ರವೇ ವಸ್ತು, ಉಳಿದುದೆಲ್ಲ ಮಾಯೆ; ಸ್ವಪ್ನವಿದ್ದ ಹಾಗೆ, ಅವಸ್ತು. ಮಾಯಾರೂಪದ ಕೋಲು ಸಚ್ಚಿದಾನಂದ ಸಾಗರದ ಮಧ್ಯದಲ್ಲಿ ಬಿದ್ದಿದೆ. ಮಾಯೆ ಎಂಬ ಕೋಲನ್ನು ತೆಗೆದುಬಿಟ್ಟಿದ್ದೇ ಆದರೆ ಇನ್ನು ಉಳಿದುಕೊಳ್ಳುವುದು ಆ ಅಖಂಡ ಸಚ್ಚಿದಾನಂದ ಸಾಗರ. ನಾಟಕದಲ್ಲಿ ಮಾಯಾರೂಪದ ಪರದೆ ಕೆಳಕ್ಕೆ ಬಿದ್ದಾಗ ಮನುಷ್ಯ ಬಹಿರ್ಮುಖನಾಗಿ ಬಿಡುತ್ತಾನೆ. ✤